ಶ್ರೀ ಬಿ. ಆರ್. ಯಾವಗಲ್.—ಮಾನ್ಯ ಅಧ್ಯಕ್ಷರೆ, ಅವರ ಒಂದು ಸೂಚನೆಯನ್ನು ಪರಿಶೀಲನೆ ಮಾಡುತ್ತೇನೆ.

ಧಾರವಾಡದಲ್ಲಿರುವ ಗ್ರಂಥಾಲಯಂ ಕೇಂದ್ರವನ್ನು ನಿರ್ಮಿಸುವುದು

೧೯೧೩. **ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ).**—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡದಲ್ಲಿ ಗ್ರಂಥಾಲಯದ ಸ್ವಂತ ಕಟ್ಟಡದ ನಿರ್ಮಾಣ ಕಾರ್ಯ ಯಾವ ಹಂತದಲ್ಲಿದೆ?

ಆ) ಈ ಕಟ್ಟಡ ನಿರ್ಮಿಸುವ ಕಾರ್ಯ ಪ್ರಾರಂಭಿಸುವುದು ಅವಶ್ಯಕ ಎಂಬುದು ಸರ್ಕಾರದವರ ಗಮನದಲ್ಲಿದೆಯೇ?

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು).—

ಅ) ಇನ್ನೂ ಪ್ರಾರಂಭವಾಗಿಲ್ಲ.

ಆ) ಹೌದು.

ಶ್ರೀ ಚಂದ್ರಕಾಂತ ಜಿ. ಬೆಲ್ಲದ.—ಮಾನ್ಯ ಅಧ್ಯಕ್ಷರೆ, ಧಾರವಾಡದಲ್ಲಿ ಗ್ರಂಥಾಲಯ ಕ್ಕೋಸ್ಕರ ೧೯೭೦ರಲ್ಲಿ ಹಣ ತೆಗೆದಿಟ್ಟಿದ್ದರು. ಇದರ ಬಗ್ಗೆ ತಾವು ಏನು ಹೇಳುತ್ತೀರಿ?

ಶ್ರೀ ಎಂ. ರಘುಪತಿ.—ಅದಕ್ಕೆ ೧೯೮೨ರಲ್ಲಿ ಅಡ್ಮಿನಿಸ್ಟ್ರೇಟಿವ್ ಸಾಂಕ್ಷನ್ ಕೊಟ್ಟರು. ಕೊಟ್ಟಮೇಲೆ ೧೯೮೩ರಲ್ಲಿ ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲದಿರುವುದರಿಂದ, ಅಂದೇ ರದ್ದುಮಾಡಿದ್ದಾರೆ. ಈಗ ಈ ಆಯವ್ಯಯದಲ್ಲಿ ಏನಾದರೂ ಮಾಡಬಹುದಿತ್ತು. ಆದರೆ, ಈಗ ಹಣದ ಪರಿಸ್ಥಿತಿ ಇರುವುದರಿಂದ, ಮುಂದಿನ ವರ್ಷ ಈ ಕಾರ್ಯವನ್ನು ಪ್ರಾರಂಭ ಮಾಡಲು ಸಾಧ್ಯವಿದೆಯೇ ಎಂಬುದನ್ನು ಪರಿಶೀಲನೆ ಮಾಡುತ್ತೇನೆ, ಹಾಗೂ ಧಾರವಾಡದಲ್ಲಿ ಅವಶ್ಯಕತೆ ಇದೆಯೇ ಎಂಬುದನ್ನು ಪರಿಶೀಲಿಸುತ್ತೇನೆ.

ಶಿವಮೊಗ್ಗದಲ್ಲಿ ಸಹ್ಯಾದ್ರಿ ವಿಶ್ವವಿದ್ಯಾಲಯದ ಸ್ಥಾಪನೆ

೧೩೩೨. **ಶ್ರೀ ಕೆ. ಹೆಚ್. ಶ್ರೀನಿವಾಸ್ (ಶಿವಮೊಗ್ಗ).**—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ಹಿಂದೆ ಭರವಸೆ ನೀಡಿದಂತೆ ೧೯೮೫-೮೬ನೇ ಶೈಕ್ಷಣಿಕ ವರ್ಷದಿಂದ ಶಿವಮೊಗ್ಗದಲ್ಲಿ ಉದ್ದೇಶಿತ ಸಹ್ಯಾದ್ರಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ಸರ್ಕಾರದವರು ತೀರ್ಮಾನ ತೆಗೆದುಕೊಂಡಿದ್ದರೆ?

ಆ) ಹಾಗಿದ್ದಲ್ಲಿ ಈ ಬಗ್ಗೆ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಎಂ. ರಘುಪತಿ (ಮಾನ್ಯ ವಿದ್ಯಾ ಸಚಿವರು).—

ಅ) ಮತ್ತು ಆ) ಸಹ್ಯಾದ್ರಿ ವಿಶ್ವವಿದ್ಯಾನಿಲಯದ ಸ್ಥಾಪನೆ ಬಗ್ಗೆ ಪರಿಶೀಲಿಸಿ ವರದಿ ನೀಡಲು ಒಂದು ವಿಶೇಷ ಸದಸ್ಯ ಆಯೋಗವನ್ನು ರಚಿಸಲಾಗಿದೆ. ವರದಿ ಬಂದ ಕೂಡಲೇ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಈ ಉತ್ತರ ಬಹುಶಃ ಹಳೆದಾಗಿದೆ. ಆದ್ದರಿಂದ ಮಾನ್ಯ ಸದಸ್ಯರು ತಿದ್ದುಪಡಿ ಮಾಡಿ, ಉತ್ತರ ಹೇಳಲಿ.

ಶ್ರೀ ಎಂ. ರಘುಪತಿ.—ಈ ವರ್ಷ ದಲ್ಲಿ ಅಂದರೆ, ಜನವರಿ ತಿಂಗಳಲ್ಲಿ ಸಹ್ಯಾದ್ರಿ ವಿಶ್ವವಿದ್ಯಾನಿಲಯ ಪ್ರಾರಂಭ ಮಾಡಬೇಕೆಂದು ಸರ್ಕಾರ ನಿರ್ಧಾರ ತೆಗೆದುಕೊಂಡು, ವಿಶೇಷ ಸದಸ್ಯ ಆಯೋಗವನ್ನು ಅದಕ್ಕಾಗಿ ರಚನೆ ಮಾಡಿದೆ. ಪ್ರಾಕ್ಸಿಮಿಟಿ ಯಾವುದು ಇರಬೇಕು ಯಾವ ಯಾವ ಕಾಲೇಜುಗಳನ್ನು

ನೋಂದಣಿ ಮಾಡಬಹುದು, ಯಾವ ಯಾವ ಜಿಲ್ಲೆಗಳನ್ನು ನೋಂದಣಿಕೆ ಮಾಡಬಹುದು ಎಂಬ ವಿಷಯದಲ್ಲಿ ಜಯರಾಮನ್ ರವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡಲಾಗಿದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಆ ಆಯೋಗದವರು ಎಷ್ಟು ತಿಂಗಳಲ್ಲಿ ವರದಿಯನ್ನು ಕೊಡುತ್ತಾರೆ ಎಂಬುದನ್ನು ತಿಳಿಸಬೇಕು.

ಶ್ರೀ ಎಂ. ರಘುಪತಿ.—ಇನ್ನು ೨ ತಿಂಗಳಲ್ಲಿ ಅವರು ತಮ್ಮ ವರದಿಯನ್ನು ಕೊಡುತ್ತಾರೆ.

ಕಾಲೇಜು ಶಿಕ್ಷಣ ನಿರ್ದೇಶನಾಲಯದಲ್ಲಿನ ಗ್ರಂಥಾಲಯ ಸಹಾಯಕರುಗಳ ಬಡ್ತಿಯ ಬಗ್ಗೆ

೧೯೦೨ ಶ್ರೀ ಜಿ. ರಾಜುಗೌಡ (ಹನೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಾಲೇಜು ಶಿಕ್ಷಣ ಇಲಾಖೆಯ ಗ್ರಂಥಾಲಯ ಸಹಾಯಕರು ೧೩ ವರ್ಷಗಳವರೆಗೆ ಸೇವೆ ಸಲ್ಲಿಸಿದ್ದರೂ ಅವರಿಗೆ ಯಾವುದೇ ರೀತಿ ಬಡ್ತಿಯನ್ನು ನೀಡದೆ ಇರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ?

ಆ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಗ್ರಂಥಾಲಯ ಸಹಾಯಕರಿಗೆ ೧೩ ವರ್ಷಗಳ ಸೇವೆ ಸಲ್ಲಿಸಿದಂತಹವರಿಗೆ ಬಡ್ತಿ ನೀಡಿರುವುದು ಸರಕಾರದ ಗಮನಕ್ಕೆ ಬಂದಿದೆಯೆ ?

ಇ) ಹಾಗಿದ್ದಲ್ಲಿ ಮೇಲ್ಕಂಡ ತಾರತಮ್ಯಕ್ಕೆ ಕಾರಣವೇನು ? ಹಾಗೂ ಈ ತಾರತಮ್ಯವನ್ನು ಸರ್ಕಾರದವರು ಸರಿಪಡಿಸಲು ಕ್ರಮ ಕೈಗೊಳ್ಳುವರೇ ?

ಈ) ಸದರಿ ನೌಕರರಿಗೆ ವೇತನ ಪರಿಷ್ಕರಣದಲ್ಲಿ ತಾರತಮ್ಯವುಂಟಾಗಿರುವುದರಿಂದ ಇದನು ಸರಿಪಡಿಸಲು ಸರ್ಕಾರದವರು ಕ್ರಮಕೈಗೊಳ್ಳುವರೇ ?

ಶ್ರೀ ಎಂ. ರಘುಪತಿ (ಮಾನ್ಯ ಶಿಕ್ಷಣ ಸಚಿವರು).—

ಅ) ಕಾಲೇಜು ಶಿಕ್ಷಣ ನಿರ್ದೇಶನಾಲಯದಲ್ಲಿ ಈಗಾಗಲೆ ೭ ಮಂದಿ ಗ್ರಂಥಾಲಯ ಸಹಾಯಕರು ಕೆಲಸ ಮಾಡುತ್ತಿದ್ದು, ಅವರಲ್ಲಿ ಯಾರು ೧೩ ವರ್ಷಗಳ ಸೇವೆಯನ್ನು ಪೂರ್ತಿಗೊಳಿಸಿರುವುದಿಲ್ಲ ಮತ್ತು ಕೆಲಸ ಮಾಡುತ್ತಿರುವ ಗ್ರಂಥಾಲಯ ಸಹಾಯಕರ ಪೈಕಿ ಈ ಇಲಾಖೆಯ ಹುದ್ದೆ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಅರ್ಹತೆಯುಳ್ಳವರಿಗೆ ಗ್ರಂಥಪಾಲಕರಾಗಿ ಈಗಾಗಲೆ ಬಡ್ತಿ ಕೊಡಲಾಗಿದೆ.

ಆ) ಬಡ್ತಿ ಕೊಟ್ಟಿರುವುದಿಲ್ಲ.

ಇ) ಅ) ಮತ್ತು ಆ) ಗೆ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಜಿ. ರಾಜುಗೌಡ.—ಈ ಸಚಿವರು ಸತ್ಯಕ್ಕೆ ದೂರವಾದ ಉತ್ತರವನ್ನು ಕೊಟ್ಟಿದ್ದಾರೆ ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ಗ್ರಂಥಾಲಯ ಸಹಾಯಕರಿಗೆ ೫೫೦-೧೦೫೦ ವೇತನವನ್ನು ೩೦.೧೦.೮೫ರ ಸರ್ಕಾರ ಆಜ್ಞೆ ಪ್ರಕಾರ ಜಾರಿಗೆ ಕೊಟ್ಟಿದ್ದೀರಾ ? ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಗ್ರಂಥಾಲಯ ಸಹಾಯಕರು ೫ ವರ್ಷ ಸೇವೆ ಸಲ್ಲಿಸಿದ್ದರೂ ೫೫೦-೧೦೫೦ ವೇತನವನ್ನು ಕೊಟ್ಟಿರತಕ್ಕದ್ದು ನಿಜವೇ ? ಆದ್ದರಿಂದ, ದಯವಿಟ್ಟು ಪರಿಷ್ಕೃತ ಉತ್ತರವನ್ನು ಒದಗಿಸಬೇಕು. ೧೩ ವರ್ಷ ಸೇವೆ ಸಲ್ಲಿಸಿದ್ದರೂ ಕೂಡ ಈ ರೀತಿ ವೇತನವನ್ನು ಕೊಡದೇ ಇರಲು ಕಾರಣವೇನು ?

ಶ್ರೀ ಎಂ. ರಘುಪತಿ.—ಏನಾದರೂ ಅಂತಹ ನ್ಯೂನತೆಗಳಿದ್ದರೆ ಅದನ್ನು ಪರಿಶೀಲನೆ ಮಾಡಿ: ಪರಿಹಾರ ಒದಗಿಸಲು ಏರ್ಪಾಡು ಮಾಡುತ್ತೇನೆ.

ಶ್ರೀ ಜಿ. ರಾಜುಗೌಡ.—ತಾವು ದಯವಿಟ್ಟು ಆಶ್ವಾಸನೆಯನ್ನು ಕೊಡಬೇಕು. ಒಂದು ವೇಳೆ ನಾವು ಹೇಳುವುದು ಸತ್ಯವಾದರೆ ಸ್ಕೇಲನ್ನು ಫಿಕ್ಸ್ ಮಾಡಿಕೊಡಬೇಕೆಂದು ಕೇಳುತ್ತೇನೆ.